ಓ:ಎಸ್:ನಂ.250/2015

ಡಿ .ಡಬ್ಲ್ಯೂ- 1

<u>ದಿಃ 28-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಜಿ ಎಸ್ ವಕೀಲರಿಂದ</u>

ನಾನು 4ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ವಾದಿಯು ಈ ದಾವೆಯನ್ನು ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದಾರೆ ಮತ್ತು ನಾನು ಈ ದಾವೆಯಲ್ಲಿ ಸಲ್ಲಿಸಿರುವ ತಕರಾರಿನ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಮೂಲ ಊರು ಎನ್ ಆರ್ ಪುರ ತಾಲ್ಲೂಕಿನ ಹೆಬ್ಬೆ ಗ್ರಾಮ. ನಾನು ಹುಟ್ಟಿ ಬೆಳೆದಿದ್ದು ಹೆಬ್ಬೆ ಗ್ರಾಮದಲ್ಲಿ. ನಮ್ಮ ತಾಯಿಯ ಹೆಸರು ಪುಟ್ಟಮ್ಮ ಮತ್ತು ನನ್ನ ತಂದೆಯ ಹೆಸರು ನಿಂಗಪ್ಪ. ನಮ್ಮ ತಂದೆ ತಾಯಿಯವರು ಮರಣ ಹೊಂದಿದ ದಿನಾಂಕ ಈಗ ನನಗೆ ನೆನಪಿಲ್ಲ. ನಮ್ಮ ತಂದೆ ತಾಯಿಗಳಿಗೆ ಸೇರಿದ ಯಾವುದೇ ಆಸ್ತಿಗಳು ಇರುವುದಿಲ್ಲ.

ನಮ್ಮ ಅಜ್ಜಿ ಭದ್ರಮ್ಮನಿಗೆ ಯಾವುದಾದರೂ ಆಸ್ತಿ ಇತ್ತಾ ಎಂದರೆ ಸಾಕ್ಷಿ ಇತ್ತು ಎಂದು ಸಾಕ್ಷ್ಯ ನುಡಿಯುತ್ತಾರೆ. ಭದ್ರಮ್ಮನವರ ಹೆಸರಿನಲ್ಲಿ ಸ್ಥಿರಾಸ್ತಿ ಎಂದು ತೋರಿಸಲು ನಾನು ಮನೆ ಕಂದಾಯ ರಸೀದಿ ಮತ್ತು ಗುರುತಿನ ಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಭದ್ರಮ್ಮನವರಿಗೆ ಆಸ್ತಿ ಯಾವುದರ ಮುಖಾಂತರ ಬಂದಿತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದ್ದೇನೆ.

ಭದ್ರಮ್ಮನಿಗೆ ಇಬ್ಬರು ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು. ಭದ್ರಮ್ಮನ ಇಬ್ಬರು ಗಂಡು ಮಕ್ಕಳು ಹೆಬ್ಬೆ ಗ್ರಾಮದಲ್ಲೆ ವಾಸವಾಗಿದ್ದರು ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ನಾಗರಾಜ್ ರವರು ಭದ್ರಮ್ಮನವರ ಜೊತೆ ವಾಸಗಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲಾತಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತರೆ. ಭದ್ರಮ್ಮನವರು ಯಾವ ವರ್ಷ ಮರಣ ಹೊಂದಿದ್ದಾರೆಂದರೆ ನನಗೆ ಈಗ ನೆನಪಿಲ್ಲ.

ನಾನು ಮಂಗಳೂರಿನಲ್ಲಿ ವಾಸ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಭದ್ರಮ್ಮನಿಗೆ ಸೇರಿದ ಆಸ್ತಿ ವನ್ಯ ಅರಣ್ಯ ಪ್ರದೇಶಕ್ಕೆ ವಶಪಡಿಸಿಕೊಂಡಿರುತ್ತಾರೆ. ಅದರ ಬಾಬ್ತು ಭದ್ರಮ್ಮನಿಗೆ ಸರ್ಕಾರದಿಂದ 65 ಸಾವಿರ ರೂಪಾಯಿ ಪರಿಹಾರ ಬಂದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿದ್ದೇನೆ. ಸದರಿ ಪರಿಹಾರ ಹಣವನ್ನು ವಾದಿಯು ತೆಗೆದುಕೊಂಡ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿದ್ದೇನೆ. 2000ನೇ ಸಾಲಿನಲ್ಲಿ ಭದ್ರಮ್ಮನಿಗೆ

ಸೇರಿದ ಜಮೀನನ್ನು ಸರ್ಕಾರದವರು ಸ್ವಾಧೀನಕ್ಕೆ ಪಡೆದಿರುತ್ತಾರೆ. ನನ್ನ ಅಣ್ಣ ಯಾವ ವರ್ಷದಲ್ಲಿ ಸರ್ಕಾರದಿಂದ ಪರಿಹಾರ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು, ನನ್ನ ಅಣ್ಣ ಮತ್ತು ನಮ್ಮ ಅಜ್ಜಿ ಹೆಬ್ಬೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ನಾನು ಮತದಾರರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನನ್ನ ಅಣ್ಣನಾದ ನಾಗರಾಜ್ ರವರು *1999* ರ ಸಾಲಿನಲ್ಲಿ ಎಂ.ಸಿ ಹಳ್ಳಿಗೆ ಬಂದು ತನ್ನ ಜೀವನವನ್ನು ಸಾಗಿಸುತ್ತಿದ್ದರು ಎಂದರೆ ಸಾಕ್ಷಿಯು ಅವರು ಎಂ.ಸಿ. ಹಳ್ಳಿಗೆ ಹೋಗಿಲ್ಲ ಶಿವಮೊಗ್ಗಕ್ಕೆ ಹೋಗಿ ಜೀವನ ಸಾಗಿಸುತ್ತಿದ್ದಾರೆಂದು ನುಡಿಯುತ್ತಾರೆ. *2001* ನೇ ಸಾಲಿನಲ್ಲಿ ನನ್ನ ಅಣ್ಣನಾದ ನಾಗರಾಜ್ ರವರು ಸರ್ಕಾರದವರು ಮನೆಗೆ ಸಂಬಂಧಪಟ್ಟ ಒಂದು ಹಕ್ಕುಪತ್ರವನ್ನು ನೀಡಿರುತ್ತಾರೆಂದರೆ ಸರಿ. ಎಂಸಿ ಹಳ್ಳಿ ಗ್ರಾಮದ ಸರ್ವೆ ನಂ.*12* ರಲ್ಲಿ *1* ಎಕರೆ ಜಮೀನನ್ನು ನನ್ನ ಅಣ್ಣನಾದ ನಾಗರಾಜ್ ರವರಿಗೆ ಸರ್ಕಾರದವರು *2001* ನೇ ಸಾಲಿನಲ್ಲಿ ಭೂಮಿಯನ್ನು ಮಂಜೂರು ಮಾಡಿರುತ್ತಾರೆಂದರೆ ಸರಿ. ಕಂದಾಯ ಇಲಾಖೆಯಲ್ಲಿ ಸದರಿ ಜಮೀನಿಗೆ ಸಂಬಂಧಪಟ್ಟಂತೆ ಖಾತೆ ಆಗಿ ನಾಗರಾಜ್ ರವರೇ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆಂದರೆ ಸಾಕ್ಷಿಯು ನಾನು ಸಹ ಸ್ವಾಧೀನದಲ್ಲಿದ್ದೇನೆಂದು ನುಡಿಯುತ್ತಾರೆ. ನಿಪಿ-*15* ರಿಂದ *18* ರ ಛಾಯಚಿತ್ರಗಳಲ್ಲಿ ಕಾಣಿಸುತ್ತಿರುವ ನಿವೇಶನದಲ್ಲಿ ವಾದಿ ವಾಸವಾಗಿದ್ದರು ಎಂದರೆ ಸರಿಯಲ್ಲ. ವಾದಿಯು ಅಡಿಕೆ ತೋಟವನ್ನು ದಾವ ಸ್ವತ್ತಿನಲ್ಲಿ ಬೆಳೆದಿದ್ದಾರೆ ಎಂದರೆ ಸಾಕ್ಷಿಯು ನಾನು ಸಹ ಸದರಿ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೆ ಎಂದು ನುಡಿಯುತ್ತಾರೆ. ದಾವ ಆಸ್ತಿಗಳಲ್ಲಿ ನನಗೂ ಸಹ ಹಕ್ಕಿದೆ ಎಂದು ಪ್ರಶ್ನಿಸಿ ನಾನು ಯಾವುದೇ ಪ್ರಾದಿಕಾರದ ಮುಂದೆ ಅರ್ಜಿಯನ್ನು ಸಲ್ಲಿಸಿಲ್ಲ. ದಾವ ಸ್ವತ್ತುಗಳು ವಾದಿಯ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿ ಹಕ್ಕು ಅಥವಾ ಹಿಸ್ಸೆ ಇಲ್ಲ ಎಂದರೆ ಸರಿಯಲ್ಲ. ಎಂ ಸಿ ಗ್ರಾಮದಲ್ಲಿ ನನ್ನ ಹೆಸರಿನಲ್ಲಿಸಹ ಒಂದು ಮನೆ ಮಂಜೂರಾಗಿದೆ ಎಂದರೆ ಸಾಕ್ಷಿಯು ನಾನು ಅಂಗವಿಕಲನಾದ ಕಾರಣ ಸರ್ಕಾರದಿಂದ *2013* ನೇ ಸಾಲಿನಲ್ಲಿ ಒಂದು ಮನೆ ಮಂಜೂರಾಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಬಗರ್ ಹುಕುಂ ಜಮೀನಿನಲ್ಲಿ ಉಳುಮೆಯನ್ನು ಮಾಡುತ್ತಿದ್ದೇನೆಂದರೆ ಸರಿಯಲ್ಲ.

ನಾನು ಚಿಕ್ಕ ವಯಸ್ಸಿನಲ್ಲೇ ಮಂಗಳೂರಿಗೆ ಹೋಗಿ ಜೀವನ ಸಾಗಿಸುತ್ತಿದ್ದೀರಿ ಎಂದರೆ ಸಾಕ್ಷಿಯು ನಾನು ಹೆಬ್ಬೆ ಗ್ರಾಮದಲ್ಲೆ ವಾಸವಾಗಿದ್ದೇನೆ. ನಾನು ಮಂಗಳೂರಿನಲ್ಲಿ ಮದುವೆ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರಿದು ಎಂ ಸಿ ಹಳ್ಳಿಗೆ ಬಂದ ಮೇಲೆ ಮದುವೆಯಾಗಿದ್ದೇನೆಂದು ಸಾಕ್ಷ್ಯ ನುಡಿಯುತ್ತಾರೆ. ವಾದಿಗೆ ಸರ್ಕಾರದಿಂದ ಮಂಜೂರಾದ ಸ್ಥಳದಲ್ಲಿ ಅವರ ಸ್ವಂತ ಹಣದಿಂದ ಮನೆಯನ್ನು ಕಟ್ಟಿಸಿದ್ದಾರೆಂದರೆ

ಸರಿಯಲ್ಲ. ದಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ಯಾವುದೇ ಕೊಡುಗೆ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ವಾದಿಯು ಸರ್ಕಾರದಿಂದ ಬಂದ ಪರಿಹಾರದ ಹಣವಾದ *65* ಸಾವಿರ ರೂಪಾಯಿಗಳಲ್ಲಿ ದಾವ ಆಸ್ತಿಗಳನ್ನು ಕ್ರಯಕ್ಕೆ ಪಡೆದಿದ್ದಾರೆಂದು ಹೇಳುವುದು ಶುದ್ದ ಸುಳ್ಳು ಎಂದರೆ ಸರಿಯಲ್ಲ. ವಾದಿಯು ಸರ್ಕಾರದಿಂದ ಯಾವುದೇ ಪರಿಹಾರದ ಮೊತ್ತವನ್ನು ತನ್ನ ಸಹಿ ಹಾಕಿ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಭದ್ರಮ್ಮನವರು ಮರಣ ಹೊಂದಿರುವುದು *1996* ನೇ ಸಾಲಿನಲ್ಲಿ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ: ಇಲ್ಲ
***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***